
## ಪುಟಾಣಿ ಭಾರತೀಯರು

ಚಿತ್ರ ಮತ್ತು ಕಥೆಗಳ ಜುಗಲಬಂದಿಯ ಪುಸ್ತಕಗಳನ್ನು ರೂಪಿಸಿ, ಪ್ರಕಟಿಸುವ ಮೂಲಕ ಕನ್ನಡದ ಮಕ್ಕಳ ಭಾವಕೋಶಗಳಿಗೆ ಬಣ್ಣಗಳನ್ನು ತುಂಬುವ ಕೆಲಸ ಮಾಡುತ್ತಾ ಬಂದಿರುವ ಅನುಪಮಾ ಬೆಣಚಿನಮರ್ಡಿ ಅವರ 'ಅವ್ವಾ ಪುಸ್ತಕ'ದ ಹೊಸ ಪ್ರಕಟಣೆ 'ಪುಟಾಣಿ ಭಾರತೀಯರು'.

ಪಿಕಾ ನಾನಿ ಕಾವ್ಯನಾಮದಲ್ಲಿ ಇಂಗ್ಲಿಷ್‌ನಲ್ಲಿ ಬರೆಯುವ ದೇವಿಕಾ ಮೂರ್ತಿ ಅವರ 'ದಿ ಲಿಟಲ್ ಇಂಡಿಯನ್ಸ್' ಕೃತಿಯನ್ನು, ಎಚ್.ವಿ. ಶ್ರೀನಿವಾಸಮೂರ್ತಿ ಹಾಗೂ ಅಪೂರ್ವ ಬಿ.ಎ. ಕನ್ನಡಕ್ಕೆ ತಂದಿದ್ದಾರೆ. ದೇಶದ ವಿವಿಧ ಪ್ರದೇಶಗಳನ್ನು ಕಥೆಗಳ ಮೂಲಕ ಪರಿಚಯಿಸುವ ವಿಶಿಷ್ಟ ಪ್ರಯತ್ನ ಈ ಕೃತಿಯ ರಚನೆಗಳಲ್ಲಿದೆ.

'ಪುಟಾಣಿ ಭಾರತೀಯರು' ಕೃತಿಯಲ್ಲಿ ಹದಿನಾರು ರಚನೆಗಳಿವೆ. ಪ್ರತಿಯೊಂದು ಬರಹಕ್ಕೂ ರೇಖಾಚಿತ್ರಗಳ ಸ್ಪಂದನವಿದೆ. ಈ ಬರಹಗಳ ವಿನ್ಯಾಸ ವಿಶಿಷ್ಟವಾದುದು. ರಾಜ್ಯವೊಂದರ ಭೌತಿಕ ಚಹರೆಯ ಪರಿಚಯದ ಜೊತೆಗೆ, ಆ ನಾಡಿಗೆ ಸಂಬಂಧಿಸಿದ ಐತಿಹ್ಯಗಳು ಹಾಗೂ ಸಾಂಸ್ಕೃತಿಕ ಹೆಚ್ಚುಗಾರಿಕೆಯ ಮಾಹಿತಿ ತುಣುಕುಗಳು ಬರಹದ ಮೊದಲ ಭಾಗ. ಎರಡನೇ ಭಾಗದಲ್ಲಿ ರಾಜ್ಯವನ್ನು ಯಾವುದಾದರೊಂದು ರೂಪದಲ್ಲಿ ಸಂಕೇತಿಸುವ ಕಥೆಯೊಂದರ ನಿರೂಪಣೆಯಿದೆ. ಈ ಕಥೆ ಮಾಹಿತಿಪೂರ್ಣವಾಗಿಯೂ, ಮಕ್ಕಳಿಗೆ ರುಚಿಸುವಂತೆಯೂ ಇದೆ. ಮೂರನೇ ಭಾಗದಲ್ಲಿ ಕಥೆಯಲ್ಲಿನ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಟಿಪ್ಪಣಿಗಳಿವೆ. ಈ ಟಿಪ್ಪಣಿಗಳು ಕೂಡ ನಾಡಿನ ಅನನ್ಯತೆಯನ್ನು ಕಟ್ಟಿಕೊಡುವ ಪ್ರಯತ್ನಗಳಾಗಿವೆ.

ಈ ಕೃತಿಯ ಸ್ವರೂಪವನ್ನು ಉದಾಹರಣೆಯೊಂದರ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ಗುಜರಾತ್ ಕುರಿತ ಬರಹ – ಗುಜರಾತ್ ಡೈನೋಸಾರ್‌ಗಳ ನೆಲೆಯಾಗಿದ್ದ ಸಾಧ್ಯತೆಯ ಬಗ್ಗೆ ಗಮನಸೆಳೆಯುತ್ತದೆ. ಆ ರಾಜ್ಯದ ಪ್ರಮುಖ ವ್ಯಕ್ತಿಗಳ ಪಟ್ಟಿ ನೀಡುತ್ತದೆ. ವರ್ಗೀಸ್ ಕುರಿಯನ್ ಆರಂಭಿಸಿದ 'ಹಾಲಿನ ಆಂದೋಲನ' ಹಾಗೂ 'ಅಮುಲ್' ಕುರಿತು ಮಾಹಿತಿ ನೀಡುತ್ತದೆ.




ಸಿಂಹಗಳನ್ನೊಳಗೊಂಡ ಗುಜರಾತ್‌ನ ಪರಿಸರ ಹಾಗೂ 'ಉಪ್ಪು ಮರುಭೂಮಿ' ಕುರಿತ ವಿವರಗಳಿವೆ. ನಂತರದ ಭಾಗದಲ್ಲಿನ ಕಥೆ, ತಮ್ಮ ಶಾಲೆಯ ಮೈದಾನವನ್ನು ಉಳಿಸಿಕೊಳ್ಳಲು ವಿದ್ಯಾರ್ಥಿಗಳು ಮಹಾತ್ಮ ಗಾಂಧೀಜಿಯಿಂದ ಪ್ರೇರಣೆ ಪಡೆಯುವ ಪ್ರಸಂಗವಿದೆ. ನಂತರದ ಟಿಪ್ಪಣಿಗಳಲ್ಲಿ ಸಾಬರಮತಿ ಆಶ್ರಮ ಹಾಗೂ ದಂಡಿ ಸತ್ಯಾಗ್ರಹದ ವಿವರಗಳಿವೆ.

ವೀರಗಲ್ಲುಗಳಿಗೆ ಸಂಬಂಧಿಸಿದ ವಿವರಗಳು, ಕಥನದ ಮೂಲಕ ಕರ್ನಾಟಕವನ್ನು ಚಿತ್ರಿಸುವ ಬರಹವೂ ಈ ಕೃತಿಯಲ್ಲಿದೆ. ಮನರಂಜನೆಯ ಜೊತೆಗೆ ಮಕ್ಕಳ ಮನೋವಿಕಾಸಕ್ಕೂ ಈ ಕೃತಿ ಪೂರಕವಾಗಿದೆ. ದೊಡ್ಡ ಮಕ್ಕಳು ಓದಬಹುದಾದ, ಎಳೆಯರಿಗೆ ಹಿರಿಯರು ಓದಿ ಹೇಳಬಹುದಾದ ಬರಹಗಳ ಈ ಕೃತಿ ಕನ್ನಡದಲ್ಲಿನ ಮಕ್ಕಳ ಸಾಹಿತ್ಯಕ್ಕೆ ಒಳ್ಳೆಯ ಸೇರ್ಪಡೆ. ಈ ಕೃತಿಯ ಸ್ವರೂಪವನ್ನು ಮಾದರಿಯಾಗಿ ಇರಿಸಿಕೊಂಡು, ರಾಜ್ಯದ ಪ್ರತಿಯೊಂದು ಜಿಲ್ಲೆಗಳ ಕುರಿತ ಬರಹಗಳ ಸಂಕಲನವೊಂದನ್ನು ಮಕ್ಕಳ ಬಗ್ಗೆ ಪ್ರೀತಿಯುಳ್ಳವರು ರೂಪಿಸಬಹುದಾಗಿದೆ.

**ಪುಟಾಣಿ ಭಾರತೀಯರು; ಲೇ: ಪಿಕಾ ನಾನಿ; ಪು: 148; ಬೆ: ರೂ. 265; ಪ್ರ: ಅವ್ವಾ ಪುಸ್ತಕ, ಬೆಂಗಳೂರು. ಫೋನ್: 9739266465**